# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

ಸಿಸಿ ನಂ.434/2019

ಚಾಸಾ-08 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 26.04.2024

ಹೆಸರು : ರಜಿಯಾ ಬೇಗಂ

ಗಂಡನ ಹೆಸರು : ಮಲೀಕ್ ಪಟೇಲ್ ಬಿರಾದರ

ವಯಸ್ಸು : 41 ವರ್ಷ

ಉದ್ಯೋಗ : WASI Afzalpur PS

ವಾಸಸ್ಥಳ : ಅಫಜಲಪೂರ.

: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :

ನಾನು 2014 ರಿಂದ ಸದ್ಯದ ವರೆಗೆ ಅಫಜಲಪೂರ ಪೋ.ಠಾ. ದಲ್ಲಿ ಮೊದಲು ಮಹಿಳಾ ಮುಖ್ಯ ಪೇದೆ ಎಂದು ನಂತರ ಮಹಿಳಾ ಎ.ಎಸ.ಐ. ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ : 08.11.2018 ರಂದು ನಾನು ಚಾಸಾ-4 ರವರಿಂದ ಹೇಳಿಕೆಯನ್ನು ಪಡೆದು, ಸದರಿ ಹೇಳಿಕೆಯ ಆಧಾರದ ಮೇಲೆ ನಮ್ಮ ಠಾಣೆಯ ಗುನ್ಹೆ ನಂಬರ 22/2018 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು . ಪ್ರ.ವ. ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**1** ಎಂದು ಸಾಕ್ಷಿಯ ಸಹಿಯನ್ನು ನಿಪಿ **-1(ಎ)** ಎಂದು ಗುರುತಿಲಾಯಿತು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**2** ಎಂದು ಗುರುತಿಸಲಾಗಿದೆ. ಆದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-**2(ಎ)** ಎಂದು ಗುರುತಿಸಲಾಯಿತು .

=

ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡು ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ. ಸದರಿ ಹೇಳಿಕೆಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-**3** ಮತ್ತು ನಿಪಿ **-4** ಎಂದು ಗುರುತಿಸಲಾಗಿದೆ. ಆರೋಪಿ ಪತ್ತೆ ಕುರಿತು ವರದಿಯನ್ನು ಸಲ್ಲಿಸಿದ್ದು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-**5** ಮತ್ತು ನಿಪಿ-**6** ಎಂದು ಗುರುತಿಸಲಾಗಿದೆ.

ವಾಹನಗಳನ್ನು ಜಪ್ತಿ ಪಡಿಕೊಂಡಿದ್ದು, ಅವುಗಳ ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಸಾಕ್ಷಿಯು ಈಗ ನೋಡುತ್ತಿದ್ದು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**7** ರಿಂದ ನಿಪಿ-**10** ಎಂದು ಗುರುತಿಸಲಾಗಿದೆ. ದಿನಾಂಕಃ18.12.2018 ರಂದು ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ.ಎಸ.ಪಿ.ವಕೀಲರಿಂದಃ

ಚಾಸಾ-1 ನಮ್ಮ ಮೇಲಾಧಿಕಾರಿಳಾಗಿರುತ್ತಾರೆ. ಚಾಸಾ-4 ಮತ್ತು 5 ರವರು ನನ್ನ ಸಹೋದ್ಯೋಗಿಗಳು ಇರತ್ತಾರೆ. ದಿನಾಂಕಃ 08.11.2018 ರಂದು ಚಾಸಾ-1 ರವರು ಫಿರ್ಯಾದಿ ನೀಡಿದರು ಎಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಪತ್ತೆ ಕುರಿತು ಚಾಸಾ-4 ಮ ತ್ತು 5 ರವರನ್ನು ಕಳುಹಿಸಿಕೊಟ್ಟು ಮಾಹಿತಿಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ ನಿಪಿ-10 ರಲ್ಲಿ ತೋರಿಸಿದ ವಾಹನಗಳು ಖಾಲಿ ಇರುತ್ತವೆ ಎಂದರೆ ಸರಿ.

ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಫಿರ್ಯಾದಿ ದಾಖಲಿಸಿ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರೂ ಕೂಡಾ ಠಾಣಾ ಅಂಕಿ-ಅಂಶಗಳ ಸಲುವಾಗಿ ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ **- ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ